ಏರ್ಪಟ್ಟವು. ಮನಸ್ತಾಪಗಳು ಕಡಿಮೆಯಾದವು. ಒಬ್ಬರ ಕಷ್ಟಕ್ಕೆ ಇನ್ನೊಬ್ಬರು ಸ್ಪಂದಿಸತೊಡಗಿದರು. ಆಗಾಗ ಅಕ್ಕ ಪಕ್ಕದ ಕುಟುಂಬಗಳು ಒಂದಾಗಿ ಚರ್ಚೆಗೆ ಇಳಿದವು. ಇಡೀ ಊರು ಹೊಸ ಜಗತ್ತಿಗೆ ತೆರೆದುಕೊಳ್ಳತೊಡಗಿತು.

ಮೇಷ್ಟ್ರ ಸಲಹೆಯ ಮೇರೆಗೆ ಕೂಲಿಯನ್ನವಲಂಬಿಸಿದ ಜನರು ಸೇರಿ ಕೂಲಿಕಾರರ ಸಂಘವನ್ನು ಸ್ಥಾಪಿಸಿದರು. ನಾಲ್ವರು ಹಿರಿಯರು ಹಾಗೂ ಐವರು ಯುವಕರು ಸಂಘದ ಪದಾಧಿಕಾರಿಗಳಾದರು. ಶಂಕ್ರಪ್ಪ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದರು. ಕಾಲೇಜು ಕಟ್ಟೆ ಹತ್ತಿದ್ದ ಯುವಕನೋರ್ವ ಸಂಘದ ಕಾರ್ಯದರ್ಶಿಯಾದ. ಸಂಘದ ಆಶ್ರಯದಲ್ಲಿ ಒಂದು ಕಿರಾಣಿ ಅಂಗಡಿ ಪ್ರಾರಂಭವಾಯಿತು. ಅಂಗಡಿಯನ್ನು ನಡೆಸಲು ಇಬ್ಬರು ಯುವಕರು ನೇಮಕಗೊಂಡರು. ಇದಕ್ಕೆ ಪೂರಕವಾಗಿ ಒಂದು ಬಟ್ಟೆಯ ಅಂಗಡಿಯೂ ಕೆಲಸ ಮಾಡಲು ಪ್ರಾರಂಭಿಸಿತು. ತಮ್ಮ ದೈನಂದಿನ ಅಗತ್ಯಗಳಿಗಾಗಿ ಊರ ಜನ ಈ ಅಂಗಡಿಗಳನ್ನೇ ಆಶ್ರಯಿಸಿದರು. ಅದುವರೆಗೆ ಊರಲ್ಲಿದ್ದ ಅಂಗಡಿಗಳಿಗಿಂತ ಅಗ್ಗವಾಗಿ ಈ ಅಂಗಡಿಗಳಲ್ಲಿ ವಸ್ತುಗಳು ಲಭ್ಯವಾದವು. ಊರ ಯುವಕರೆಲ್ಲ ಸೇರಿ ಮೇಷ್ಟ್ರ ಮಾರ್ಗದರ್ಶನದಲ್ಲಿ ಯುವಕ ಸಂಘವನ್ನು ಪ್ರಾರಂಭಿಸಿದರು. ಈ ಯುವಕ ಸಂಘ ಒಂದು ಗ್ರಂಥಾಲಯವನ್ನು ಪ್ರಾರಂಭಿಸಿತು. ಜನ ಹೊಸ ಲೋಕಕ್ಕೆ ತಮ್ಮನ್ನು ತೆರೆದುಕೊಂಡರು.

ಕೂಲಿಯನ್ನೇ ಅವಲಂಬಿಸಿದ ಜನಕ್ಕೆ ಕೂಲಿಕಾರರ ಸಂಘ ಸಮಷ್ಟಿಪ್ರಜ್ಞೆಯನ್ನು ಒದಗಿಸಿತು. ಕೂಲಿ ಕೆಲಸವನ್ನು ಸಂಘವೇ ನಿಯಂತ್ರಿಸತೊಡಗಿತು. ಸಹಜವಾಗಿ ಕೂಲಿಯ ದರಗಳಲ್ಲಿ ಮಾರ್ಪಾಟುಗಳಾದವು. ಕೂಲಿಯ ಅಗತ್ಯವಿದ್ದವರು ಕೂಲಿಕಾರರ ಸಂಘದ ಪದಾಧಿಕಾರಿಗಳನ್ನು ಕಾಣಬೇಕಾದ ಸ್ಥಿತಿ ಮೂಡಿತು. ಬದಲಾದ ಪರಿಸ್ಥಿತಿ ಪಟ್ಟಭದ್ರರ ನಿದ್ದೆ ಕೆಡಿಸಿದ್ದು ಸಹಜ. ಅವರೆಲ್ಲರೂ ಚೇರ್ಮನ್ನರ ನೇತೃತ್ವದಲ್ಲಿ ಒಂದೆಡೆ ಸೇರಿದರು. 'ಇದು ಅತಿಯಾಯ್ತು ಚೇರ್ಮನ್ರೇ! ಏನಾದ್ರೂ ಮಾಡದೇ ಹೋದ್ರೆ ನಾವು ಜೀವನ ಮಾಡೋದು ಕಷ್ಟ' ಎಂದು ಅಲವತ್ತುಕೊಂಡರು. 'ಎಲ್ಲಾ ಆ ಮೇಷ್ಟ್ರೇ ಮಾಡ್ತಿರೋದು' ಎನುತ್ತ ಚೇರ್ಮನ್ ಹಲ್ಲು ಕಡಿದರು.

ಒಂದು ದಿನ ಸಾಯಂಕಾಲ ಕೂಲಿಕಾರರ ಸೊಸೈಟಿಯ ಕಾರ್ಯದರ್ಶಿ ನಾಲ್ಕು ಯುವಕರೊಡನೆ ಪಂಚಾಯತ ಕಚೇರಿಗೆ ಬಂದ. ಚೇರ್ಮನ್ರು ಆಸನಾರೂಢರಾಗಿದ್ದರು. ಇವರನ್ನು ನೋಡಿ 'ಏನ್ರಯ್ಯಾ?' ಅಂದರು ಗಂಭೀರವಾಗಿ. 'ಚೇರ್ಮನ್ರೇ! ಗ್ರಾಮಸಭೆ ಯಾವಾಗ ಕರೀತೀರಿ?' ಎಂದು ಪ್ರಶ್ನಿಸಿದ ಕಾರ್ಯದರ್ಶಿ. ಚೇರ್ಮನ್ರ ಸಿಟ್ಟು ನೆತ್ತಿಗೇರಿತು. 'ನಿನಗೇನಯ್ಯ ಸಂಬಂಧ? ಅದನ್ನ ನಾವು ನೋಡಿಕೋತೀವಿ' ಅಂದ್ರು. 'ನೋಡಿಕೊಳಿ. ನೋಡಿಕೊಳ್ಳೋದು ನಿಮ್ಮ ಕೆಲಸ. ನಾನು ಒಬ್ಬ ಗ್ರಾಮಸ್ಥ. ಪಂಚಾಯತದ ಬಗ್ಗೆ ನಮಗೆ ಒಂದಿಷ್ಟು ಮಾಹಿತಿ ಬೇಕು. ಶೌಚಾಲಯ ಕಟ್ಟಿಸೋದಕ್ಕೆ ಸರಕಾರ ಸಬ್ಸಿಡಿ ಕೊಡ್ತಿದೆ ಅಂತ ಪತ್ರಿಕೇಲಿ ಬಂದಿದೆ. ಅದರ ಬಗ್ಗೆ ನಮಗೆ ವಿವರ ಬೇಕು' ಅಂದ ಕಾರ್ಯದರ್ಶಿ.

'ಇದನ್ನ ಆ ಮೇಷ್ಟ್ರು ಹೇಳಿಕೊಟ್ನಾ?'

'ಇದಕ್ಯಾಕೆ ಮೇಷ್ಟ್ರು ಬೇಕು? ಯಾಕೆ; ಪೇಪರಲ್ಲಿ ಬಂದಿದ್ದು ಸುಳ್ಳಾ?'

'ಅದನ್ನ ಕೇಳೋಕೆ ನಿಮ್ಮ ವಾರ್ಡಿನ ಪ್ರತಿನಿಧಿ ಇದ್ದಾನೆ. ಅವನನ್ನೇ ಕೇಳ್ಕೋ ಹೋಗು' ಎಂದು ಏರಿದ ಧ್ವನಿಯಲ್ಲಿ ಹೇಳಿದರು ಚೇರ್ಮನ್.

'ನೀವು ಸಭೆ ಕರೀಲಿಲ್ಲಾ ಅಂದ್ರೆ ನಾವು ಮೇಲೆ ಬರೀಬೇಕಾಗತ್ತೆ. ಇನ್ನೊಂದು ವಾರದಲ್ಲಿ